# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1012 |
| ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 23-02-2024 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ತುಮಕೂರು ಜಿಲ್ಲೆಯಲ್ಲಿ ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿರುವ ಸಂಖ್ಯೆ ಎಷ್ಟು; ಮಕ್ಕಳಿಗೆ ಬಾಲ್ಯವಿವಾಹ ಮಾಡುತ್ತಿರುವ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಕಳೆದ 5 ವರ್ಷಗಳಲ್ಲಿ ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು) | ಬಂದಿದೆ.<br><br>ತುಮಕೂರು ಜಿಲ್ಲೆಯಲ್ಲಿ ಕಳೆದ 5 ವರ್ಷಗಳಲ್ಲಿ ದಾಖಲಾಗಿರುವ ಬಾಲ್ಯವಿವಾಹ ಪ್ರಕರಣಗಳ ತಾಲ್ಲೂಕುವಾರು ಅಂಕಿಅಂಶದ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| ಆ. | ಬಂದಿದ್ದಲ್ಲಿ, ಬಾಲ್ಯವಿವಾಹ ಪ್ರಕರಣಗಳನ್ನು ಸಂಪೂರ್ಣವಾಗಿ ತಡೆಗಟ್ಟಲು ಸರ್ಕಾರ ಯಾವ ಕ್ರಮಕೈಗೊಂಡಿದೆ? | **<u>ಬಾಲ್ಯ ವಿವಾಹ ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ</u>:**<br><br>• ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ಕೇಂದ್ರದ ಕಾಯ್ದೆಯಾಗಿದ್ದು, ಸದರಿ ಕಾಯ್ದೆಯನ್ನು ರಾಜ್ಯದಲ್ಲಿ ದಿನಾಂಕ:10-01-2007 ರಿಂದ ಜಾರಿಗೆ ತರಲಾಗಿದೆ.<br>• ಬಾಲ್ಯ ವಿವಾಹವನ್ನು ತಡೆಯುವ ನಿಟ್ಟಿನಲ್ಲಿ ನಿವೃತ ನ್ಯಾಯ ಮೂರ್ತಿಗಳಾದ ಶ್ರೀ ಜಸ್ಟಿಸ್ ಶಿವರಾಜ್ ಪಾಟೀಲ್ ಇವರ ಅಧ್ಯಕ್ಷತೆಯಲ್ಲಿ ರಚಿಸಿರುವ ಸಮಿತಿಯ ಶಿಫಾರಸ್ಸಿನ ಮೇರೆಗೆ ರಾಜ್ಯದಲ್ಲಿ ಪ್ರತ್ಯೇಕವಾಗಿ ಬಾಲ್ಯವಿವಾಹ ನಿಷೇಧ ಕೋಶವನ್ನು ದಿನಾಂಕ :16-11-2011 ರಲ್ಲಿ ಸ್ಥಾಪಿಸಲಾಗಿದೆ.<br>• ಬಾಲ್ಯವಿವಾಹ ನಿಷೇಧ ಕಾಯ್ದೆಯ ಕುರಿತು ಹೊರತರಲಾದ ಕ್ರಮಬದ್ಧ ಕಾರ್ಯವಿಧಾನ ಪ್ರಕ್ರಿಯೆಗಳ ಬಗ್ಗೆ ವಿವಿಧ ಭಾಗೀದಾರ ಇಲಾಖೆಯ ಬಾಲ್ಯವಿವಾಹ ನಿಷೇಧಾಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ.<br>• ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕು ಮತ್ತು ಗ್ರಾಮ ಮಟ್ಟದಲ್ಲಿ ಬಾಲ್ಯವಿವಾಹ ನಿಷೇಧದ ಕುರಿತು ಕೆ.ಎಸ್.ಆರ್.ಟಿ.ಸಿ. ಬಸ್ಸಳ ಮೇಲೆ ಜಾಹೀರಾತು ಪ್ರದರ್ಶನ ಮತ್ತು ವೀಡಿಯೋ ಆನ್ ವೀಲ್ಸ್ ಅಭಿಯಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.<br>• ಕಸ ವಿಲೇವಾರಿ ಮಾಡುವ ವಾಹನಗಳ ಮೂಲಕ ಬಾಲ್ಯವಿವಾಹ ನಿಷೇಧದ ಬಗ್ಗೆ ಜಾಗೃತಿ ಮೂಡಿಸಲಾಗಿದೆ.<br>• ಯುವ ಜನಾಂಗದಲ್ಲಿ ಅರಿವು ಮೂಡಿಸುವ "**ಯುವಮೇಳ**" ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.<br>• KARNAPEX 2024- ರಾಜ್ಯ ಮಟ್ಟದ ಅಂಚೆ ಚೀಟಿಗಳ ಸಂಗ್ರಹದ ಪ್ರದರ್ಶನದ ಸಂದರ್ಭದಲ್ಲಿ ಅಂಚೆ ಇಲಾಖೆಯ ಮೂಲಕ "ಬಾಲ್ಯ ವಿವಾಹ ನಿಷೇಧ ಕಾರ್ಯಕ್ರಮದ ಅನುಷ್ಠಾನ" ಕುರಿತು ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಲಾಗಿದೆ. |

| | | |
|---|---|---|
| | | • ಇಲಾಖೆಯಿಂದ ಬಾಲ್ಯವಿವಾಹ ನಿಷೇದ ಕಾಯ್ದೆ ಹಾಗೂ ಬಾಲ್ಯವಿವಾಹದಿಂದಾಗುವ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಲ್ಲಿ ಹಾಗೂ ಭಾಗೀದಾರ ಇಲಾಖೆ, ಬಾಲ್ಯವಿವಾಹ ನಿಷೇಧಾಧಿಕಾರಿಗಳು, ಸ್ವಯಂ ಸೇವಾ ಸಂಸ್ಥೆಗಳು, ಧಾರ್ಮಿಕ ಮುಖಂಡರು ಮತ್ತು ಶಾಲಾ – ಕಾಲೇಜು ವಿದ್ಯಾರ್ಥಿಗಳಿಗೆ ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಾನೂನು ಸೇವಾ ಪ್ರಾಧಿಕಾರದ ಸಹಯೋಗದೊಂದಿಗೆ ಅರಿವು ಮೂಡಿಸುವ ತರಬೇತಿ ಮತ್ತು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>• ಚುನಾಯಿತ ಪ್ರತಿನಿಧಿಗಳು, ಚೌಲ್ಟ್ರಿ ಮಾಲೀಕರು, ಪ್ರಿಂಟಿಂಗ್ ಪ್ರೆಸ್ ಮಾಲೀಕರು, ಧಾರ್ಮಿಕ ಮುಖಂಡರು, ಸಾಮೂಹಿಕ ವಿವಾಹ ಸಂಘಟಕರಲ್ಲಿ ಜಾಗೃತಿ ಮೂಡಿಸಲು ತರಬೇತಿ ಮತ್ತು ಸಂವೇದನಾ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.<br>• ಸರ್ಕಾರಿ ಕಛೇರಿಗಳಲ್ಲಿ ಗೋಡೆ ಬರಹ, ರೇಡಿಯೋ ಮತ್ತು ಟಿವಿ, ಬೀದಿ ನಾಟಕಗಳು, ಸಾರ್ವಜನಿಕ ಸ್ಥಳಗಳು, ಶಾಲೆಗಳು ಮತ್ತು ಧಾರ್ಮಿಕ ಸ್ಥಳಗಳಲ್ಲಿ ಪೋಸ್ಟರ್ / ಶಾಸನಬದ್ಧ ಬೋರ್ಡ್‌ಗಳ ಪ್ರದರ್ಶನದ ಮೂಲಕ ನಿಯಮಿತವಾಗಿ ಜಾಗೃತಿ ಮೂಡಿಸಲಾಗುತ್ತಿದೆ. |

**ಸಂಖ್ಯೆ: ಮಮಇ 45 ಮಮಅ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.

## ಅನುಬಂಧ

### 2018-19 ರಿಂದ 2022-23ನೇ ಸಾಲಿನವರೆಗೆ ಬಾಲ್ಯವಿವಾಹ ನಿಷೇಧ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಮಾಹಿತಿ

| ಕ್ರ ಸಂ. | ತಾಲ್ಲೂಕಿನ ಹೆಸರು | 2018-19 | | | 2019-20 | | | 2020-21 | | | 2021-22 | | | 2022-23 | | |
|---|---|---|---|---|---|---|---|---|---|---|---|---|---|---|---|---|
| | | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ | ಸ್ವೀಕರಿಸಿದ ದೂರುಗಳ ಸಂಖ್ಯೆ | ತಡೆದ ಸಂಖ್ಯೆ | ನಡೆದ ಸಂಖ್ಯೆ |
| 1 | ತುಮಕೂರು (ನ) | 3 | 2 | 1 | 0 | 0 | 0 | 9 | 8 | 1 | 1 | 1 | 0 | 2 | 1 | 1 |
| 2 | ತುಮಕೂರು (ಗ್ರಾ) | 3 | 3 | 0 | 6 | 5 | 1 | 15 | 15 | 0 | 11 | 11 | 0 | 5 | 5 | 0 |
| 3 | ಗುಬ್ಬಿ | 1 | 1 | 0 | 4 | 4 | 0 | 3 | 3 | 0 | 19 | 15 | 4 | 8 | 8 | 0 |
| 4 | ಕೊರಟಗೆರೆ | 13 | 10 | 3 | 9 | 9 | 0 | 22 | 21 | 1 | 17 | 16 | 1 | 6 | 4 | 2 |
| 5 | ಶಿರಾ | 7 | 7 | 0 | 14 | 13 | 1 | 17 | 16 | 1 | 9 | 8 | 1 | 10 | 9 | 1 |
| 6 | ತಿಪಟೂರು | 11 | 11 | 0 | 8 | 8 | 0 | 18 | 18 | 0 | 16 | 12 | 4 | 8 | 8 | 0 |
| 7 | ಚಿಕ್ಕನಾಯಕನಹಳ್ಳಿ | 2 | 2 | 0 | 2 | 2 | 0 | 9 | 9 | 0 | 15 | 14 | 1 | 18 | 16 | 2 |
| 8 | ಮಧುಗಿರಿ | 4 | 3 | 1 | 7 | 5 | 2 | 23 | 20 | 3 | 11 | 11 | 0 | 17 | 15 | 2 |
| 9 | ಪಾವಗಡ | 1 | 1 | 0 | 4 | 4 | 0 | 11 | 11 | 0 | 10 | 10 | 0 | 15 | 15 | 0 |
| 10 | ತುರುವೇಕೆರೆ | 1 | 1 | 0 | 0 | 0 | 0 | 1 | 0 | 1 | 0 | 0 | 0 | 2 | 1 | 1 |
| 11 | ಕುಣಿಗಲ್ | 4 | 4 | 0 | 1 | 1 | 0 | 2 | 2 | 0 | 2 | 2 | 0 | 4 | 3 | 1 |
| | ಒಟ್ಟು | **50** | **45** | **5** | **55** | **51** | **4** | **130** | **123** | **7** | **111** | **100** | **11** | **95** | **85** | **10** |